OS 273/2022
PW-01

ದಿನಾಂಕಃ 04-08-2026.

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರವಾಗಿ ಶ್ರೀ ಎಸ್.ಎ.ಮಾನ್ಯ ವಕೀಲರಿಂದಃ**

1. ನನ್ನ ಸ್ವಂತ ಊರು ವಿಯಜಪೂರ ಜಿಲ್ಲೆಯ ಹಲಗಲಿ ಎಂದರೆ ಸರಿ. ಸಾಕ್ಷಿ ಮಂದುವರೆದು ಶಹಾಪೂರದಲ್ಲಿ ತಮ್ಮ ಆಸ್ತಿಗಳು ಇರುವುದರಿಂದ ಇಲ್ಲಿಯೂ ಕೂಡಾ ವಾಸ ಮಾಡುವುದಾಗಿ ಹೇಳುತ್ತಾರೆ. ಹಲಗಲಿ ಗ್ರಾಮ ನನ್ನ ಗಂಡನ ಊರಾಗಿರುತ್ತದೆ. ನನ್ನ ತವರೂರು ಶಹಾಪೂರ. ನಾನು ಶಹಾಪೂರಕ್ಕೆ 10-12 ವರ್ಷಗಳಿಂದ ಬಂದು ಹೋಗಿ ಮಾಡುತ್ತಿದ್ದು ಆದರೆ ಯಾವ ದಿನಾಂಕ ಎಂದು ಹೇಳಲು ಬರುವುದಿಲ್ಲ. ಅರಳಳ್ಳಿ ಗ್ರಾಮ ಶಹಾಪೂರದಿಂದ 15 ಕಿ.ಮೀ. ಅಂತರ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತು ಮಾರಾಟಕ್ಕೆ ತೆಗೆಯಲಾಗಿರುತ್ತದೆ ಎಂದು ನನ್ನ ಅಕ್ಕನಿಗೆ ಗೊತ್ತಾಗಿರುತ್ತದೆ. 1 ನೇ ಪ್ರತಿವಾದಿ ಗಂಡ ಹಾಗೂ 2 ರಿಂದ 5 ನೇ ಪ್ರತಿವಾದಿಯ ತಂದೆ ಮೃತ ನಾಗಪ್ಪ ಇವರು ನಮ್ಮ ಅಕ್ಕನ ಮನೆಗೆ ಹೋಗಿ ಬಂದು ಮಾಡುತ್ತಿದ್ದು ಅವರು ದಾವಾ ಸ್ವತ್ತನ್ನು ಮಾರಾಟದ ಬಗ್ಗೆ ನನ್ನ ಅಕ್ಕನಿಗೆ ತಿಳಿಸಿರುತ್ತಾರೆ. ದಾವಾ ಸ್ವತ್ತು ಮಾರಾಟದ ಬಗ್ಗೆ ನನ್ನ ಅಕ್ಕನಿಗೆ ತಿಳಿದು ಬಂದಿರುತ್ತದೆ ಎಂದು ನಾನು ನನ್ನ ವಾದ ಪತ್ರದಲ್ಲಿ ಉಲ್ಲೇಖ ಮಾಡಿರುವುದಿಲ್ಲ. ನಾನು ನನ್ನ ಅಕ್ಕನ ಮನೆಗೆ ಬಂದಾಗ ಸದರಿ ಮೃತ ನಾಗಪ್ಪ ಇವರನ್ನು ಕರೆಯಿಸಿ ದಾವಾ ಸ್ವತ್ತಿನ ಕಾಗದ ಪತ್ರಗಳನ್ನು ನೋಡಿರುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ

ಉಲ್ಲೇಖ ಮಾಡಿರುವುದಿಲ್ಲ. ಸುಮಾರು 10-15 ವರ್ಷಗಳಿಂದ ಸದರಿ ನಾಗಪ್ಪ ಇವರಿಗೆ ಲೀವರ ಫೇಲ್ಯುವರ್ ಆಗಿದ್ದು ಅವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ನಾಗಪ್ಪ ಎನ್ನುವ ವ್ಯಕ್ತಿಯ ಲೀವರ್ ಸಾಮಾನ್ಯವಾದ ಅಳತೆಗಿಂತ ಹೆಚ್ಚಾಗಿದ್ದರಿಂದ ಅವರು ತಿರುಗಾಡುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದರು ಎಂದರೆ ಸರಿಯಲ್ಲ.

2. ನಾನು ನನ್ನ ಅಕ್ಕನ ಮನೆಯಲ್ಲಿದ್ದಾಗ ದಾವಾ ಸ್ವತ್ತಿನ ದಾಖಲೆಗಳನ್ನು ನೋಡಿದಾಗ ಅದು ಎರೆ ಭೂಮಿ ಎಂದು ತಿಳಿದು ಬಂದಿರುತ್ತದೆ. ಸಾಕ್ಷಿಗೆ ಈಗ ಸದರಿ ನಾಗಪ್ಪ ಇವರು ನಿಮಗೆ ದಾವಾ ಸ್ವತ್ತಿಗಾದಂತೆ ತೋರಿಸಿರುವ ಪಹಣಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಅದು ಕಳೆದಿರುವುದಾಗಿ ಹೇಳುತ್ತಾರೆ. ಸದರಿ ನಾಗಪ್ಪ ಇವರಿಗೆ ದಾವಾ ಸ್ವತ್ತು ಅವರ ತಂದೆಯಿಂದ ಬಂದಿರುತ್ತದೆ. ನಾನು ದಾವಾ ಸ್ವತ್ತಿನ ದಾಖಲೆಗಳನ್ನು ನೋಡಿದಾಗ ಸದರಿ ಸ್ವತ್ತು ಸದರಿ ನಾಗಪ್ಪ ಇವರ ಹಿರಿಯರ ಸ್ವತ್ತು ಎಂದು ನನ್ನ ಗಮನಕ್ಕೆ ಬಂದಿರುತ್ತದೆ. ಸದರಿ ಪಹಣಿಯಲ್ಲಿ ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ನಮೂದಾಗಿತ್ತು ಎಂದರೆ ಸರಿಯಲ್ಲ. ನಾನು ಸದರಿ ಸಂದರ್ಭದಲ್ಲಿ ಸದರಿ ನಾಗಪ್ಪ ಇವರ ಹೆಂಡತಿ ಮತ್ತು ಮಕ್ಕಳನ್ನು ವಿಚಾರಿಸಿರುವುದಿಲ್ಲ.

3. ನಿಪಿ.1 ನ್ನು ಮಾಡಿದ 1 ವರ್ಷದ ನಂತರ ಸದರಿ ನಾಗಪ್ಪ ಇವರಿಗೆ ನನ್ನ ಪರವಾಗಿ ಖರೀದಿ ಪತ್ರವನ್ನು ಮಾಡಿಕೋಡಬೇಕೆಂದು ಕರೆದಿರುತ್ತೇನೆ. ನಾನು ಸದರಿಯವರಿಗೆ ನೋಟಿಸನ್ನು ಕೊಟ್ಟಿರುತ್ತೇನೆ. ನಾನು ಸದರಿಯವರಿಗೆ ಸದರಿ ನೋಟಿಸನ್ನು ನನ್ನ ಮಾನ್ಯ ವಕೀಲರ ಮೂಲಕ ಸನ್ 2012 ರಲ್ಲಿ ಕಳುಸಿರುತ್ತೇನೆ. ಸದರಿ ನೋಟಿಸಿಗೆ

ಸದರಿ ನಾಗಪ್ಪ ಇವರು ಯಾವುದೇ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ. ಸದರಿ ನೋಟಿಸ್ ಸದರಿ ನಾಗಪ್ಪ ಇವರಿಗೆ ತಲುಪಿರಬಹುದು. ಸನ್ 2012 ರಲ್ಲಿ ಸದರಿ ನಾಗಪ್ಪ ಇವರು ನನಗೆ ಖರೀದಿ ಪತ್ರವನ್ನು ಮಾಡಿ ಕೊಡದೇ ಇರುವುದಕ್ಕೆ ಅವರಿಗೆ ನೋಟಿಸನ್ನು ಕೊಟ್ಟಿದ್ದು ಹಾಗೂ ಅವರು ಅದಕ್ಕೆ ಪ್ರತ್ಯುತ್ತರವನ್ನು ಕೊಡದ ಕಾರಣ ನಾನು ಅವರ ವಿರುದ್ದ ಸನ್ 2012 ರಲ್ಲಿ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಗೆ ಈಗ ಸನ್ 2012 ರಿಂದ ನೀವು ಯಾವ ಕಾರಣಕ್ಕಾಗಿ ಸದರಿ ನಾಗಪ್ಪ ಇವರ ಮೇಲೆ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿ ಅವರು ಬರುತ್ತಾರೆಂದು ಹೇಳಿ ಸುಮಾರು 04 ವರ್ಷಗಳ ಕಾಲ ಕಾದಿರುವುದಾಗಿ ಹೇಳುತ್ತಾರೆ. ಸದರಿ ನಾಗಪ್ಪ ಇವರಿಗೆ ಸದರಿ ನೋಟಿಸ ತಲುಪಿರುತ್ತದೋ ಇಲ್ಲವೋ ಹಾಗೂ ಅವರು ಸದರಿ ನೋಟಿಸಿಗೆ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ ಹಾಗೂ ಸುಮಾರು 04 ವರ್ಷಗಳ ಕಾಲ ನಾನು ಅವರು ಖರೀದಿ ಪತ್ರವನ್ನು ಮಾಡಿಕೊಡುವುದಾಗಿ ಕಾಯ್ದಿದ್ದರ ಬಗ್ಗೆ ನಾನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ಸನ್ 2016 ರಿಂದ 2021 ರವರೆಗೂ ರಲ್ಲಿ ನಾನು ಸದರಿ ನಾಗಪ್ಪ ಇವರಿಗೆ ನಾನು ಅವರಿಗೆ ಸನ್ 2012 ರಲ್ಲಿ ನೋಟಿಸನ್ನು ಕೊಟ್ಟಿದ್ದು ಅದಕ್ಕೆ ಅವರು ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ ಹಾಗೂ ಈಗ ಅವರು ಬಂದು ನನ್ನ ಪರ ಖರೀದಿ ಪತ್ರವನ್ನು ಮಾಡಿಕೊಡಬೇಕೆಂದು ಹೇಳಿ ಅವರಿಗೆ ಯಾವುದೇ ನೊಟೀಸನ್ನು ಜಾರಿ ಮಾಡಿರುವುದಿಲ್ಲ. ನಾನು ಪ್ರಸ್ತುತ ದಾವೆಯನ್ನು ಸಲ್ಲಿಸುವ ಮುಂಚಿತವಾಗಿ ಪ್ರತಿವಾದಿಗಳಿಗೆ ಕಳುಹಿಸಿರುವ ನೋಟಿಸಿನಲ್ಲಿ ನಾನು ಸದರಿ ನಾಗಪ್ಪ ಇವರಿಗೆ ಸನ್ 2012 ರಲ್ಲಿ ನೋಟಿಸನ್ನು ಜಾರಿ ಮಾಡಿದ್ದು ಆದರೆ ಅವರು ಅದಕ್ಕೆ ಯಾವುದೇ

ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ ಹಾಗೂ ನಾನು ಸುಮಾರು 04 ವರ್ಷಗಳ ಕಾಲ ಅವರು ಬಂದು ಖರೀದಿ ಪತ್ರವನ್ನು ನನ್ನ ಪರ ಮಾಡಿಕೊಡುತ್ತಾರೆ ಎಂದು ಕಾಯ್ದಿದ್ದರ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ. ಸದರಿ ನಾಗಪ್ಪ ಇವರು ದಾವಾ ಸ್ವತ್ತನ್ನು ಮಾರಾಟ ಮಾಡಲು ಯಾವತ್ತಿಗೂ ಪ್ರಸ್ತಾಪ ಮಾಡಿರುವುದಿಲ್ಲ ಹಾಗೂ ನಾನು ಅವರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಾಗಪ್ಪ ಇವರಿಗೆ ಅಜಾರಿಯಾಗಿದ್ದರ ಲಾಭವನ್ನು ಪಡೆದುಕೊಂಡು ನಾನು ಖೊಟ್ಟಿಯಾಗಿ ನಿಪಿ.14 ರಂತೆ ದಾಖಲೆಯನ್ನು ತಯಾರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಮುಂಚಿತವಾಗಿ ನಾನು ಪ್ರತಿವಾದಿಗಳಿಗೆ ಯಾವುದೇ ತಿಳುವಳಿಕೆ ಪತ್ರವನ್ನು ಕೊಟ್ಟಿರುವುದಿಲ್ಲ.

4. ನನ್ನ ಅಕ್ಕ ಶ್ರೀಮತಿ ಶಶಿಕಲಾ ಇವರ ಸಮಕ್ಷಮ ದಾವಾ ಸ್ವತ್ತಿನ ಬಗ್ಗೆ ಮಾತುಕತೆ ಮಾಡಿರುತ್ತೇವೆ ಎಂದು ನನ್ನ ವಾದ ಪತ್ರದಲ್ಲಿ ನಾನು ನಮೂದು ಮಾಡಿರುವುದಿಲ್ಲ. ನಿಪಿ.14 ಕ್ಕೆ ನನ್ನ ಸದರಿ ಅಕ್ಕ ಸಹಿ ಮಾಡಿರುವುದಿಲ್ಲ. ನಾನು ದುಡ್ಡನ್ನು sub-registrar ಕಚೇರಿಯಲ್ಲಿ ಕೊಟ್ಟಿರುತ್ತೇನೆ. ಸದರಿ sub-registrar ಕಚೇರಿಯಲ್ಲಿ ರೂ.7,50,000/- ಗಳನ್ನು ಕೊಡಲಾಗಿರುತ್ತದೆ ಎಂದು ಯಾವುದೇ ಸ್ವೀಕೃತಿಯನ್ನು ಪಡೆದುಕೊಂಡಿರುವುದಿಲ್ಲ. ನಿಪಿ.14 ರಲ್ಲಿ ಸದರಿ ಹಣವನ್ನು ಕೊಟ್ಟಿದ್ದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ.14 ಆಗುವ ದಿನ ನನ್ನ ಹತ್ತಿರ ಸದರಿ ರೂ.7,50,000/- ಗಳು ಇದ್ದ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ನಾಗಪ್ಪ ಇವರು ತಮ್ಮ ಸ್ವ-ಇಚ್ಛೆಯಿಂದ ನನ್ನ ಪರ

ನಿಪಿ.14 ನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಸದರಿ ನಾಗಪ್ಪ ಇವರಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ನಾಗಪ್ಪ ಇವರು ದೈಹಿಕವಾಗಿ ಅಸ್ವಸ್ತರಾಗಿದ್ದರಿಂದ ಅದರ ದುರ್ಲಾಭವನ್ನು ಪಡೆದುಕೊಂಡು ನಾನು ನಿಪಿ.14 ರಂತೆ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸದರಿ ಅಕ್ಕ ಇವರಿಗೆ ಸದರಿ ನಾಗಪ್ಪ ಇವರ ದೈಹಿಕ ಸ್ಥಿತಿಯ ಬಗ್ಗೆ ತಿಳಿದಿದ್ದರಿಂದ ನನ್ನನ್ನು ಕರೆಯಿಸಿ ನನ್ನಿಂದ ನಿಪಿ.14 ರ ದಾಖಲೆಯನ್ನು ಸೃಷ್ಟಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.14 ಪ್ರತಿವಾದಿಗಳ ಮೇಲೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.14 ನ್ನು ನಾವು ಮೋಸದಿಂದ ಮಾಡಿಕೊಂಡಿದ್ದರಿಂದ ಅವರು ಜೀವಿತ ಇರುವವರೆಗೂ ನಿಪಿ.14 ರ ಜಾರಿಯ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಅವರು ತೀರಿಕೊಂಡ ನಂತರ ಸುಳ್ಳಾದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.14 ಮೋಸದಿಂದ ಆಗಿರುವುದರಿಂದ ಪ್ರತಿವಾದಿಗಳು ಅದನ್ನು ಜಾರಿಮಾಡಿಕೊಡುವ ಯಾವುದೇ ಭಾಧ್ಯತೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು.ಪ್ರ.ದ.ನ್ಯಾ.ದಂ. ಶಹಾಪೂರ.